**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ ನ್ಯಾಯಾಲಯ, ಉಡುಪಿ.**

**ಸಿ.ಸಿ.ಃ 20/2017**
ಪಿ.ಡಬ್ಲ್ಯೂಃ **9, ಸಿ.ಡಬ್ಲ್ಯೂಃ 8**

**ಸಾಕ್ಷಿದಾರರ ಹೆಸರು** ಃ ಪ್ರದೀಪ್ ನಾಯಕ್
ಗಂಡನ **ಹೆಸರು** ಃ ರಾಧಾಕೃಷ್ಣ ನಾಯಕ್
**ವಯಸ್ಸು** ಃ **33 ವರ್ಷ**
**ಉದ್ಯೋಗ** ಃ ಗೂಡಂಗಡಿ
**ವಾಸಸ್ಥಳ** ಃ ಹಂದಾಡಿ

**ದಿಃ 28.11.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾ**ಯಿತು.

**ಮುಖ್ಯ ವಿಚಾರಣೆಃ ಮಾನ್ಯ** ಹಿರಿಯ ಸಹಾಯದ ಅಭಿಯೋಜಕರಿಂದಃ

**1.** ಸಾಕ್ಷಿಗೆ ದಿಃ **02.01.2013** ರ ಸೊತ್ತು ಸ್ವಾಧೀನತಾ ಮಹಜರನ್ನು ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು ಕಾರಣ ಸದ್ರಿ ಮಹಜರನ್ನು ನಿ.ಪಿ-**7** ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-**7**(ಎ) ಎಂದು ಗುರುತಿಸಿದೆ. ಸುಮಾರು **6** ವರ್ಷಗಳ ಹಿಂದೆ ಪೋಲೀಸರು ಹೇಳಿದ ಮೇರೆಗೆ ಮಣಿಪಾಲ ಪೋಲೀಸ್ ಠಾಣೆಯಲ್ಲಿ ನಿ.ಪಿ-**7** ಕ್ಕೆ ಸಹಿಯನ್ನು ಮಾಡಿರುತ್ತೇನೆ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನಾನು **1** ನೇ ಆರೋಪಿ ಸುಂದರ್ ರಾಜ್ ಅವರನ್ನು ನೋಡಿಲ್ಲ. ಪೋಲೀಸರು ಆತನಿಂದ ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ.

ಈ ಹಂತದಲ್ಲಿ ಮಾನ್ಯ ಹಿರಿಯ ಅಭಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಗಿದೆ.

**ಪಾಟೀಸವಾಲುಃ** ಮಾನ್ಯ ಹಿರಿಯ ಸಹಾಯದ ಅಭಿಯೋಜಕರಿಂದಃ

**2.** ದಿಃ **02.01.2013** ರಂದು ಮಧ್ಯಾಹ್ನ **11.45** ಗಂಟೆಗೆ ಪೋಲೀಸರು ನನ್ನನ್ನು ಬ್ರಹ್ಮಾವರ ಠಾಣೆಗೆ ಬರಲು ಹೇಳಿದ್ದು ಅಲ್ಲಿ ನಾನು ಹೋದಾಗ **1** ನೇ ಆರೋಪಿಯು ಅಲ್ಲಿ ಇದ್ದು ಆತನು ತನ್ನ ಹೇಳಿಕೆಯಲ್ಲಿ ತನ್ನ ಜೊತೆ ಬಂದರೆ ತಾನು ಬೇರೆ ಬೇರೆ ಪ್ರಕರಣಗಳಲ್ಲಿ ಕಳ್ಳತನ ಮಾಡಿದ ಸೊತ್ತುಗಳನ್ನು ತೋರಿಸುವುದಾಗಿ ಹೇಳಿದ್ದು ಆ ಪ್ರಕಾರ ನಾನು, ಚಾ.ಸಾ-**7** ಹಾಗೂ ಪೋಲೀಸರು ಮತ್ತು ಪೋಲೀಸರು ಹಾಗೂ ಅಕ್ಕಸಾಲಿಗರೊಂದಿಗೆ ಆರೋಪಿ ತೋರಿಸಿದ ಜಾಗವಾದ ಬಡಗುಬೆಟ್ಟುವಿನ ಚಿಟ್ಪಾಡಿಗೆ ಹೋಗಿದ್ದು ಅಲ್ಲಿ ಆರೋಪಿಯು ಒಂದು ಮನೆಯನ್ನು ತೋರಿಸಿ ಆ ಮನೆಯ ಒಳಗಡೆ ಹೋಗಿ ಆರೋಪಿಯು ಕೆಲವೊಂದು ಬಂಗಾರದ ಆಭರಣಗಳನ್ನು

ಮತ್ತು ಈ ಪ್ರಕರಣಕ್ಕೆ ಸಂಬಂದಪಟ್ಟಂತೆ ಈಗಾಗಲೇ ಗುರುತಿಸಿರುವ ಮುದ್ದೆಮಾಲು 1 ಮತ್ತು 3 ನ್ನು ಮತ್ತು ಬೇರೆ ಪ್ರಕರಣಕ್ಕೆ ಸಂಬಂದಪಟ್ಟಂತೆ 12 ಸಾವಿರ ರೂ. ನಗದನ್ನು ಸ್ವಾಧೀನಕ್ಕೆ ಪಡೆದು ನಿ.ಪಿ-7 ರಂತೆ ಮಹಜರನ್ನು ತಯಾರಿಸಿ ಸ್ಥಳದಲ್ಲೇ ನನ್ನ ಸಹಿಯನ್ನು ಪಡೆದಿದ್ದಾರೆ ಎಂದರೆ ಸರಿಯಲ್ಲ. ನಾನು 1 ನೇಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷ್ಯ ಅಧಿನಿಯಮ 299 ರಂತೆ ಸಾಕ್ಷ್ಯ ವಿಚಾರಣೆಃ

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾ** ಯಿತು)

**ಓ ಹೇ ಕೇ ಸ ಇದೆ ಎಂದು ಒಪ್ಪಿದರು**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಎ.ಸಿ.ಜೆ.ಎಮ್, ಉಡುಪಿ.**